## ನಿಮ್ಮೊಡನೆ

# ರಸ್ತೆಗಳಲ್ಲಿ ಮೈದಳೆದ ಮಳೆನೀರಿನ ಕನ್ನಡಿಯಲ್ಲಿ ಕಾಣಿಸುತ್ತಿರುವ ಬಿಂಬಗಳು ಹೇಳುತ್ತಿರುವುದೇನು?

**ಮಳೆನೀರು ಉಂಟುಮಾಡಿರುವ ಸಂಕಷ್ಟಗಳಲ್ಲಿ ಇರಬಹುದಾದ ಪಾಠಗಳನ್ನು ಅರಿಯುವುದು ನಮಗೆ ಸಾಧ್ಯವಾಗಬೇಕು. ಆಗ, ಇಂದಿನ ಸಮಸ್ಯೆಗಳಿಗೆ ಪರಿಹಾರದ ಜೊತೆಗೆ, ಮುಂದಿನ ದಿನಗಳಲ್ಲಿ ಮಳೆನೀರಿನ ನಿರ್ವಹಣೆಯ ದಾರಿಗಳೂ ತೆರೆದುಕೊಳ್ಳುತ್ತವೆ. ಹುಚ್ಚುಮಳೆಯ ರೌದ್ರರೂಪಕ್ಕೆ ಕಾರಣಗಳನ್ನು ಹುಡುಕಿ, ಅದಕ್ಕೆ ಔಷಧಿ ಮಾಡುವ ಜಾಣ್ಮೆಯೂ ಅಗತ್ಯ.**



ಈಶ್ವರ್

ಪ್ರಕೃತಿ ವಿಕೋಪವನ್ನು ಕೇಡಿನ ರೂಪದಲ್ಲಷ್ಟೇ ನೋಡಬಾರದು. ಸಮಾಜದ ನಾಳೆಗಳ ಹಿತಕ್ಕೆ ಪೂರಕವಾದ ಪಾಠಗಳೇನಾದರೂ ಆ ದುರಂತದಲ್ಲಿ ಇವೆಯಾ ಎಂದು ಗಮನಿಸಬೇಕು. ಕಲಿಕೆಯ ರೂಪದಲ್ಲಿ ನೋಡದೆ ಹೋದರೆ, ಇಂದಿನ ದುರಂತ ನಾಳೆಗೆ ಮರೆತುಹೋಗುತ್ತದೆ ಹಾಗೂ ಆ ಮರೆವೆ ಇಂದಿನ ಅನಾಹುತಗಳನ್ನು ಮುಂದೆಯೂ ಹೊಸ ರೂಪದಲ್ಲಿ ಸೃಷ್ಟಿಸುತ್ತದೆ. ಆ ಕಾರಣದಿಂದಾಗಿ, ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ತಲೆದೋರಿರುವ ಸಂಕಷ್ಟಗಳನ್ನು 'ಪಠ್ಯ'ದ ರೂಪದಲ್ಲಿ ನೋಡುವುದರಿಂದ ಲಾಭವಿದೆ ಹಾಗೂ ಅಂಥ ನೋಟದಲ್ಲಿ ಮಳೆನೀರಿನ ನಿರ್ವಹಣೆಯ ದಾರಿಗಳು ತೆರೆದುಕೊಳ್ಳುತ್ತವೆ.

ನಗರಪ್ರದೇಶಗಳು ಹಾಗೂ ಗ್ರಾಮೀಣಪ್ರದೇಶಗಳಲ್ಲಿ ಅತಿ ಮಳೆ ಉಂಟುಮಾಡುವ ಸಂಕಷ್ಟಗಳು ಬೇರೆ ಬೇರೆ ರೂಪದವು. ಆದರೆ, ಆ ಸಂಕಷ್ಟಗಳಿಗೆ ಕಾರಣಗಳಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ಮಳೆನೀರು ನಿರ್ವಹಣೆಯ ವ್ಯವಸ್ಥೆಯಲ್ಲಿನ ಲೋಪಗಳಿಂದಾಗಿ ಪ್ರವಾಹ ರೂಪುಗೊಳ್ಳುತ್ತಿದೆ. ಕೆರೆಗಳ ಒತ್ತುವರಿ ಹಾಗೂ ಕೆರೆಗಳು ಬಡಾವಣೆಗಳಾಗಿರುವುದು ನಗರಗಳಲ್ಲಿ ಪ್ರವಾಹ ಉಂಟಾಗಲು ಪ್ರಮುಖ ಕಾರಣ. ಒಳಚರಂಡಿಗಳ ಅಸಮರ್ಪಕ ವ್ಯವಸ್ಥೆಯೂ ಊರುಕೇರಿಗಳನ್ನು ಮಳೆನೀರು ಆವರಿಸಿಕೊಳ್ಳಲು ಕಾರಣವಾಗುತ್ತದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಉಂಟಾದ ಪ್ರವಾಹಕ್ಕೆ ಕಾರಣಗಳನ್ನು ಹುಡುಕಬೇಕಾದವರು ರಾಜಕಾರಣದ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಪ್ರವಾಹದಿಂದ ಪಾಠಗಳನ್ನು ಕಲಿಯುವ ಆಸಕ್ತಿ ಅವರಿಗಿದ್ದಂತಿಲ್ಲ. ಸಮಸ್ಯೆಗಳಿಗೆ ಉತ್ತರ ದೊರಕಿಸಿಕೊಡಬೇಕಾದವರು, ವೈಫಲ್ಯಕ್ಕೆ ಕಾರಣಗಳನ್ನು ಮತ್ತೊಬ್ಬರಲ್ಲಿ ಹುಡುಕಲು ಪ್ರಯತ್ನಿಸುವುದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಮಾರ್ಗವಾಗಿರುವಂತೆ, ಬೇಜವಾಬ್ದಾರಿತನವೂ ಹೌದು. ಜನರ ಬಗ್ಗೆ ಕಾಳಜಿಯುಳ್ಳ ರಾಜಕಾರಣಿಗಳಿಗೆ ಸಂಕಷ್ಟದ ಸಮಯದಲ್ಲಿ ಮಾತನಾಡಲು, ಇತರರ ಹುಳುಕು ಹುಡುಕಲು ಸಮಯವಿರುವುದಿಲ್ಲ. ಮಳೆನೀರಿನಿಂದಾಗಿ ಜನ ಕಂಗಾಲಾಗಿರುವ ಸಮಯದಲ್ಲಿ ಬೆಣ್ಣೆದೋಸೆ ತಿನ್ನಬೇಕೆಂದು ಜನಪ್ರತಿನಿಧಿಗೆ ಅನ್ನಿಸಿದರೆ, ಅವರ ಸಂವೇದನೆಗೇ ಜಿಡ್ಡು ಹತ್ತಿದೆ ಎಂದರ್ಥ.

ಅತಿವೃಷ್ಟಿಯ ದಿನಗಳಲ್ಲಿ ಎಲ್ಲೆಲ್ಲೂ ನೀರಿನ ಬಿಂಬಗಳೇ ಕಾಣುತ್ತಿವೆ. ಈ ಜಲಸಮೃದ್ಧಿಯ ಬಿಂಬಗಳ ಹಿಂದೆ ಜಲಕ್ಷಾಮದ ಚಿತ್ರಣವೂ ನಮಗೆ ಕಾಣಿಸಬೇಕು. ಮಳೆ ಯದ್ವಾತದ್ವಾ ಸುರಿಯುವುದು ಹಾಗೂ ಮರೀಚಿಕೆಯಾಗಿ ಪರಿಣಮಿಸುವುದು ಎರಡೂ ಅಪಾಯಕಾರಿಯೇ. ಅತಿವೃಷ್ಟಿ ಹಾಗೂ ಕ್ಷಾಮ ಒಂದೇ ನಾಣ್ಯದ ಎರಡು ಮುಖಗಳು. ಹಾಗಾಗಿ, ಮಳೆ ಹೆಚ್ಚು ಸುರಿದಾಗ ಅದನ್ನು ನಿಭಾಯಿಸುವ ಕಲೆಯನ್ನು ರೂಢಿಸಿಕೊಂಡರೆ, ಅದು ಮಳೆಯ ಕೊರತೆಯ ಸಂದರ್ಭದಲ್ಲಿ ಪರಿಹಾರವೂ ಆಗುತ್ತದೆ. ಮನೆಯ ಕಸವನ್ನು ಚರಂಡಿಗಳಿಗೆ ಸೇರಿಸದಿರುವುದು, ನೀರು ಹರಿಯುವ ದಾರಿಗಳನ್ನು ಅತಿಕ್ರಮಿಸದಿರುವುದು ಮಳೆನೀರನ್ನು ನಿಭಾಯಿಸುವ ದಾರಿಗಳಾಗಿರುವಂತೆಯೇ, ನಾಗರಿಕ ಕರ್ತವ್ಯಗಳೂ ಆಗಿವೆ. ಮುಖ್ಯವಾಗಿ, ಮಳೆನೀರನ್ನು ಬಿದ್ದಲ್ಲಿಯೇ ಮಣ್ಣಿಗೆ ಸೇರಿಸುವುದು ಹಾಗೂ ಹಸಿರುವಲಯ ಉಳಿಸಿಕೊಳ್ಳುವುದು ನಮ್ಮ ಆದ್ಯತೆಯ ವಿಷಯವಾಗಬೇಕು. ವೈಯಕ್ತಿಕ ಜವಾಬ್ದಾರಿಗಳನ್ನು ನಿರ್ವಹಿಸುವುದು ಸಾಧ್ಯವಾದಾಗ, ಕರ್ತವ್ಯಲೋಪ ಎಸಗುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಪ್ರಶ್ನಿಸುವ, ತರಾಟೆಗೆ ತೆಗೆದುಕೊಳ್ಳುವ ನೈತಿಕಶಕ್ತಿ ನಮ್ಮದಾಗುತ್ತದೆ.

ಕೇಡಿನ ಕಾರಣ ಮತ್ತು ಪರಿಣಾಮಗಳನ್ನು ಕಾಣುವ ಕಣ್ಣುಗಳನ್ನು ನಾವು ಮುಚ್ಚಿಕೊಂಡರೆ ನಾಳೆಗಳು ದುರ್ಭರವಾದಾವು. ಮುಂಗಾಣ್ಕೆಯ ಶಕ್ತಿ–ಸಾಮರ್ಥ್ಯವನ್ನು ನಮ್ಮ ರಾಜಕಾರಣಿಗಳು ಕಳೆದುಕೊಂಡಿರುವುದು ದುರದೃಷ್ಟಕರ. ರಾಜಕಾರಣಿಗಳ ಹೊಣೆಗೇಡಿಗಳಾದಾಗ, ಅವರ ಕರ್ತವ್ಯವನ್ನು ನೆನಪಿಸುವ ಜವಾಬ್ದಾರಿಯನ್ನು ನಾಗರಿಕರೇ ವಹಿಸಿಕೊಳ್ಳಬೇಕು.

ಅತಿವೃಷ್ಟಿಯಿಂದಾಗಿ ನಾಗರಿಕ ಪ್ರಪಂಚದಲ್ಲಷ್ಟೇ ಅಲ್ಲೋಲಕಲ್ಲೋಲ ಉಂಟಾಗುವುದಿಲ್ಲ. ಅತಿ ಮಳೆಯಿಂದಾಗಿ ಪ್ರಕೃತಿಯಲ್ಲೂ ಏರುಪೇರುಗಳಾಗುತ್ತವೆ. ನದಿಗಳು ಉಕ್ಕಿ ಹರಿದಾಗ ಹೊಲಗದ್ದೆಗಳು ಕೊಚ್ಚಿಹೋಗುವುದರ ಜೊತೆಗೆ ಪ್ರಾಣಿಪಕ್ಷಿಗಳೂ ಸಂಕಷ್ಟ ಎದುರಿಸಬೇಕಾಗುತ್ತದೆ. ಬದುಕುಗಳೊಂದಿಗೆ ಗುಡ್ಡಗಳು ಕುಸಿದುಬೀಳುವುದು, ಮರಗಳು ಬುಡಮೇಲಾಗುವುದು ಸಾಮಾನ್ಯ. ಮನುಷ್ಯನ ಹಸ್ತಕ್ಷೇಪದಿಂದ ಉಂಟಾದ ಏರುಪೇರುಗಳು ಪ್ರಕೃತಿಯ ಮುನಿಸಿಗೆ ಕಾರಣವಾಗುತ್ತವೆ. ಆ ಮುನಿಸು ಮನುಷ್ಯನಿಗೆ ಕೇಡು ಸೃಷ್ಟಿಸುವುದರ ಜೊತೆಗೆ, ಪ್ರಕೃತಿಗೆ ಸ್ವಯಂ ಘಾತವಾಗಿಯೂ ಪರಿಣಮಿಸುತ್ತದೆ. ಆ ಕಾರಣದಿಂದಾಗಿ, ಪ್ರಕೃತಿಯ ಸಮತೋಲನ ಕಾಪಾಡಿಕೊಳ್ಳುವುದು ನಮ್ಮ ಆದ್ಯತೆಗಳಲ್ಲೊಂದಾಗಬೇಕು. ಮಳೆಯ ನೀರು ಪ್ರವಾಹದ ರೂಪ ಪಡೆಯದಂತಿರಲು, ಚರಂಡಿಗಳು ಹಾಗೂ ಕೆರೆಕಟ್ಟೆಗಳನ್ನು ಸಮರ್ಪಕವಾಗಿ ಇಟ್ಟುಕೊಂಡರೆ ಸಾಲದು. ಹುಚ್ಚುಮಳೆಯ ರೌದ್ರರೂಪಕ್ಕೆ ಕಾರಣಗಳನ್ನು ಹುಡುಕಿ, ಅದಕ್ಕೆ ಔಷಧಿ ಮಾಡುವ ಜಾಣ್ಮೆಯೂ ಅಗತ್ಯ.

ರಸ್ತೆಗಳಲ್ಲಿ ನಿಂತ ಮಳೆನೀರು ಕನ್ನಡಿಯಂತೆ ಕಾಣಿಸುತ್ತಿದೆ. ಆ ಕನ್ನಡಿ ಸಾರ್ವಜನಿಕರು ಹಾಗೂ ರಾಜಕಾರಣಿಗಳ ಮುಖಗಳನ್ನು ಪ್ರತಿಫಲಿಸುತ್ತಿದೆ. ನೀರಕನ್ನಡಿಯಲ್ಲಿ ನಮ್ಮ ಮುಖ ನಮಗೆ ಕಾಣದೆ, ಬೇರೆ ಮುಖಗಳಷ್ಟೇ ಕಾಣಿಸುತ್ತಿದ್ದರೆ ಅದು ರೋಗದ ಲಕ್ಷಣವೇ ಸರಿ.

■ ರಘುನಾಥ ಚ.ಹ.